C.R.P.67

Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No.270/2023 ಪಿ.ಡಬ್ಲ್ಯೂ-2 ಸಿ.ಡಬ್ಲ್ಯೂ-1

ದಿನಾಂಕಃ- 08.12.2025 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಹೆಚ್.ಎಸ್.ಮುರಳಿ |
| ತಂದೆಯ ಹೆಸರು | ಶ್ರೀನಿವಾಸ |
| ವಯಸ್ಸು | 55 ವರ್ಷ |
| ಉದ್ಯೋಗ | DYSP, CID, Mysore |
| ವಾಸ | Mysore |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು 01.01.2023 ರಿಂದ 31.03.2025 ರವರೆಗೆ ಶ್ರೀರಂಗಪಟ್ಟಣ ಉಪ ವಿಭಾಗದ DYSP ಕೆಲಸ ಮಾಡಿದ್ದೇನೆ.

2. ಕೆ ಆರ್ ಸಾಗರ ವೃತ್ತ ಪೊಲೀಸ್ ಠಾಣೆ ಮತ್ತು ಅರಕೆರೆ ಪೊಲೀಸ್ ಠಾಣೆ ಶ್ರೀರಂಗಪಟ್ಟಣ ಉಪ ವಿಭಾಗದ ಪರಿಧಿಯಲ್ಲಿ ಬರುತ್ತದೆ.

3. ದಿಃ 27.06.2023 ರಂದು ನನಗೆ ಕೊಡಿಯಾಲ ಗ್ರಾಮದಲ್ಲಿ ರಾಮೇಗೌಡರ ಮಗ ಶಿಶಿಕುಮಾರ ತನ್ನ ಮನೆಯ ಹತ್ತಿರ ಗಾಂಜಾ ಗಿಡ ಬೆಳೆದಿರುವುದಾಗಿ ಸುದ್ದಿ ಬಂದಿತು. ನಾನು ನನಗೆ ಬಂದ ಸುದ್ದಿಯನ್ನು ಕೆ ಆರ್ ಸಾಗರ ವೃತ್ತ ನಿರೀಕ್ಷಕರಾದ ಪುನೀತ ರವರಿಗೆ ಅರಕೆರೆ ಪೊಲೀಸ್ ಠಾಣೆಯ PSI ರವರಿಗೆ ತಿಳಿಸಿ ಗಾಂಜಾ ಬೆಳೆದಿದೆ ಎನ್ನುವ ಸ್ಥಳಕ್ಕೆ ಹೋಗಿ

ತನಿಖೆ ಮಾಡಬೇಕಾಗಿದೆ ಎಂದು ತಿಳಿಸಿದೆನು. ಆನಂತರ ಕೆ ಆರ್ ಸಾಗರ ವೃತ್ತದ CPI ಅರಕೆರೆ ಪೊಲೀಸ್ ಠಾಣೆಯ CPI ಸಿಬ್ಬಂದಿಯ ಜೊತೆಯಲ್ಲಿ ಕೊಡಿಯೂಲ ಗ್ರಾಮಕ್ಕೆ ಹೋದೆವು.

4. ಕೊಡಿಯಾಲ ಗ್ರಾಮದಲ್ಲಿ ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಪಂಚರಾಗಿ ಕೆಲಸ ಮಾಡುವಂತೆ ನಿಪಿ–1 ಗುರುತಿಸಿರುವ ನೋಟೀಸನ್ನು ಜಾರಿ ಮಾಡಿದೆನು. ಕೊಡಿಯಾಲ ಗ್ರಾಮದಲ್ಲಿ ಸರ್ಕಾರಿ ಫೌಢಶಾಲೆಯ ದೈಹಿಕ ಶಿಕ್ಷಕರಾಗಿದ್ದ ಡಿ.ವಿ.ಸಿದ್ದರಾಜು ಬಿನ್ ದೇವೆಗೌಡ ರವರಿಗೆ ತನಿಖೆ ಮಾಡುವಾಗ ಪಂಚರಾಗಿ ಕೆಲಸ ಮಾಡುವಂತೆ ನೋಟೀಸನ್ನು ಜಾರಿ ಮಾಡಿದೆನು.

5. ಆನಂತರ ಕೆ ಆರ್ ಸಾಗರ ಪೊಲೀಸ್ ಠಾಣೆಯ CPI ಅರಕೆರೆ ಪೊಲೀಸ್ ಠಾಣೆಯ PSI ಸಿಬ್ಬಂದಿ ಡಿ. ವಿ. ಸಿದ್ದರಾಜು, ಮಹೇಶ ರವರ ಜೊತೆಯಲ್ಲಿ ಕೊಡಿಯಾಲ ಗ್ರಾಮದ ಡೈರಿ ಬಳಿ ಇದ್ದ ಶಶಿ ಕುಮಾರ ಬಿನ್ ರಾಮೇಗೌಡ ರವರ ಮನೆಯ ಹತ್ತಿರ ಹೋಗಿ ತನಿಖೆ ಮಾಡಿದೆನು. ನನಗೆ ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರಿಗೆ ಶಶಿಕುಮಾರ ರವರ ಮನೆಯ ಹಿಂಭಾಗ ಇರುವ ಜಾಗದಲ್ಲಿ 1 ಗಾಂಜಾ ಗಿಡ ಬೆಳೆಸಿರುವುದು ಕಾಣಿಸಿತು. ನಾವು ಸ್ಥಳದಲ್ಲಿ ಸಿಕ್ಕಿದ ಶಶಿಕುಮಾರನನ್ನು ವಿಚಾರಣೆ ಮಾಡಿದಾಗ ಆತ ಗಾಂಜಾ ಗಿಡವನ್ನು ಬೆಳೆದಿರುವುದಾಗಿ 3 ಅಥವಾ 6 ತಿಂಗಳಿಗೆ ಒಮ್ಮೆ ಅಪರಿಚಿತ ಸನ್ಯಾಸಿ ಬಂದು ಗಾಂಜಾ ಸೊಪ್ಪನ್ನು ಖರೀದಿ ಮಾಡಿ ಹೊಗುತ್ತಿರುವುದಾಗಿ ತಿಳಿಸಿದನು.

6. ನಾನು ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರು ಶಶಿಕುಮಾರನಿಂದ ಗಾಂಜಾ ಗಿಡಗಳನ್ನು ಕೀಳಿಸಿದೆನು. ನಾನು ಜೊತೆಯಲ್ಲಿ ಇದ್ದ HC 235 ನೇ ರವರಿಂದ electronic

ತೂಕದ ಯಂತ್ರವನ್ನು ತರಿಸಿದೆನು. ಸ್ಥಳದಲ್ಲಿ ಸಿಕ್ಕಿದ ಗಾಂಜಾ ಗಿಡವನ್ನು ತೂಕ ಮಾಡಿದಾಗ ಗಾಂಜಾ ಗಿಡ 770 ಗ್ರಾಂ ತೂಗಿತು. ಸದರಿ ಗಾಂಜಾ ಗಿಡವನ್ನು ಒಂದು ಬಿಳಿಯ ಬಟ್ಟೆಯ ಚೀಲಕ್ಕೆ ಹಾಕಿ ಬಾಯಿ ಕಟ್ಟಿ ಸೀಲು ಮಾಡಿ ಪಂಚರ ಸಮಕ್ಷಮ ನಿಪಿ–2 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿ ನಿಪಿ–3 ರಿಂದ 8 ರವರೆಗೆ ಗುರುಸಿತಿರುವ ಫೋಟೋಗಳನ್ನು ತೆಗೆಸಿ ವಶಡಿಪಸಿಕೊಂಡೆವು.

7. ನಾನು ಮೇಲೆ ಹೇಳಿದಂತೆ ಗಾಂಜಾ ಗಿಡವನ್ನು ವಶಪಡಿಸಿಕೊಂಡು ಆರೋಪಿ ಶಶಿಕುಮಾರನನ್ನು ನಮ್ಮ ಸ್ವಾಧೀನಕ್ಕೆ ಹಿಡಿದುಕೊಂಡು ಅರಕೆರೆ ಪೊಲೀಸ್ ಠಾಣೆಗೆ ಹೋಗಿ ವರದಿಯನ್ನು ತಯಾರಿಸಿ ಅರಕರೆ ಠಾಣಾದಿಕಾರಿಯಾಗಿದ್ದ PSI ಚಾಸಾ–18 ನೇ ಎಂ ಆರ್ ಬ್ಯಾಳಿ ರವರ ಕೈಗೆ ಕೊಟ್ಟೆನು. ನಾನು ವರದಿಯ ಜೊತೆಯಲ್ಲಿ ನಿಪಿ–2 ರಲಿ ಗುರುತಿಸಿರುವ 1 ರಿಂದ 8 ರವರೆಗೆ ಗುರುತಿಸಿರುವ ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಜಾರಿ ಮಾಡಿರುವ ನೋಟೀಸು, ಮಹಜರು ಮತ್ತು ಫೋಟೋಗಳನ್ನು ಚಾಸಾ–18 ರವರ ಕೈಗೆ ಕೊಟ್ಟಿದ್ದೇನೆ. ನಾನು ವರದಿಯ ಜೊತೆಯಲ್ಲಿ ಡಿ ವಿ ಸಿದ್ದರಾಜು ರವರಿಗೆ ಜಾರಿ ಮಾಡಿರುವ ನೊಟೀಸು ಮತ್ತು ಆರೋಪಿಯನ್ನು ಚಾಸಾ–18 ರವರ ಸ್ವಾಧೀನಕ್ಕೆ ಕೊಟ್ಟಿದ್ದೇನೆ.

8. ಈ ಸಾಕ್ಷಿ ಕಡತದಲ್ಲಿ ಇರುವ ಪ್ರಥಮ ವರ್ತಮಾನ ವರದಿ, ಪ್ರಥಮ ವರ್ತಮಾನ ವರದಿಯ ಜೊತೆಯಲ್ಲಿ ಇರುವ ವರದಿಯ ಮೇಲೆ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ವರದಿ ಮತ್ತು ಡಿ.ವಿ. ಸಿದ್ದರಾಜು ರವರಿಗೆ ಜಾರಿ ಮಾಡಿರುವ ನೋಟೀಸಿನ ಮೇಲೆ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿ ಮೇಲೆ ಹೇಳಿದಂತೆ ಗುರುತಿಸಿದ 3 ದಾಖಲೆಗಳನ್ನು ಕ್ರಮವಾಗಿ ನಿಪಿ–11 ರಿಂದ 13 ರವರೆಗೆ ಮತ್ತು ಈ ಸಾಕ್ಷಿಯ ಸಹಿಗಳನ್ನು ನಿಪಿ.11(ಎ), 12(ಎ) ಮತ್ತು 13(ಎ) ಎಂದು ಗುರುತಿಸಲಾಯಿತು

9. ಈ ಸಾಕ್ಷಿ ನಿಪಿ-1 ಮತ್ತು 2 ರಲ್ಲಿ ಗುರುತಿಸಿರುವ ದಾಖಲೆಗಳಲ್ಲಿ ತನ್ನ ಸಹಿ ಇರುವುದನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿಗಳನ್ನು ನಿಪಿ-1(ಬಿ) ಮತ್ತು 2 (ಬಿ) ಎಂದು ಗುರುತಿಸಲಾಯಿತು.

10. ನ್ಯಾಯಾಲಯದಲಿ ಹಾಜರಿರುವ ಆರೋಪಿ ಶಶಿ ಕುಮಾರನನ್ನು ದಿಃ 27.06.2023 ರಂದು ಅರಕೆರೆ ಗ್ರಾಮದಲ್ಲಿ ಆತನ ಮನೆಯ ಹತ್ತಿರ ಸಿಬ್ಬಂದಿಯ ಸಹಾಯದಿಂದ ಹಿಡಿದಿದ್ದೇನೆ.

11. ನಿಪಿ-3 ರಿಂದ ನಿಪಿ-8 ರವರೆಗೆ ಗುರುತಿಸಿರುವ ಫೋಟೋಗಳಲ್ಲಿ ನಾನು, ಕೆ ಆರ್ ಸಾಗರ ವೃತ್ತದ CPI, ಆರೋಪಿ ಶಶಿಕುಮಾರ್ ಪಂಚರಾದ ಮಹೇಶ ಮತ್ತ ಸಿದ್ದರಾಜು, ನಾವು ತನಿಖೆ ಮಾಡಿದ ಸ್ಥಳ, ಗಾಂಜಾ ಗಿಡ, ಗಾಂಜಾ ಗಿಡ ತೂಕ ಮಾಡಿದ ಯಂತ್ರಗಳು ಕಾಣಿಸುತ್ತಿವೆ.

12. ನಾನು 10.07.2023 ರಂದು ಅರಕೆರೆ ಪೊಲೀಸ್ ಠಾಣೆಯ PSI ರವರಿಗೆ 27.06.2023 ನೇ ದಿನಾಂಕದ ಠಾಣಾ ದಿನಚರಿಯ ಪ್ರತಿಯನ್ನು ಕವಚ ಪತ್ರ ದ ಜೊತೆಯಲ್ಲಿ ಕಳುಹಿಸಿದ್ದೇನೆ. ಈ ಸಾಕ್ಷಿ ಕಡತದಲ್ಲಿ ಇರುವ 10.07.2023 ದಿನಾಂಕದ ಪತ್ರದ ಮೇಲೆ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ ಮತ್ತು 28.06.2023 ನೇ ದಿನಾಂಕದಂದು ಅರಕೆರೆ ಪೊಲೀಸ್ ಠಾಣೆಯ PSI ರವರು ಕಳುಹಿಸಿದ ಪತ್ರದ ಮೇಲೆ ತನ್ನ ಕಛೇರಿಯ ಮುದ್ರೆ ಇರುವುದನ್ನು ಗುರುತಿಸಿದ್ದಾರೆ.

13. ಈ ಸಾಕ್ಷಿ ಮೇಲೆ ಹೇಳಿದಂತೆ ಗುರುತಿಸಿದ ದಾಖಲೆಗಳನ್ನು ನಿಪಿ.14 ಮತ್ತು 15 ಎಂದೂ ಈ ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ. ಹೆಚ್ ಡಿ ಆರ್ ವಕೀಲರಿಂದಃ-</u>

1. ದಿಃ 27.06.2023 ರಂದು ನನಗೆ ಕೊಡಿಯಾಲ ಗ್ರಾಮದಲ್ಲಿ ರಾಮೇಗೌಡರ ಮಗ ಶಿಶಿಕುಮಾರ ತನ್ನ ಮನೆಯ ಹತ್ತಿರ ಗಾಂಜಾ ಗಿಡ ಬೆಳೆದಿರುವುದಾಗಿ ಸುದ್ದಿ ಬಂದಿತು. ನಾನು ನನಗೆ ಬಂದ ಸುದ್ದಿಯನ್ನು ಕೆ ಆರ್ ಸಾಗರ ವೃತ್ತ ನಿರೀಕ್ಷಕರಾದ ಪುನೀತ ರವರಿಗೆ ಅರಕೆರೆ ಪೊಲೀಸ್ ಠಾಣೆಯ PSI ರವರಿಗೆ ತಿಳಿಸಿ ಗಾಂಜಾ ಬೆಳೆದಿದೆ ಎನ್ನುವ ಸ್ಥಳಕ್ಕೆ ಹೋಗಿ ತನಿಖೆ ಮಾಡಬೇಕಾಗಿದೆ ಎಂದು ತಿಳಿಸಿದೆನು. ಆನಂತರ ಕೆ ಆರ್ ಸಾಗರ ವೃತ್ತದ CPI ಅರಕೆರೆ ಪೊಲೀಸ್ ಠಾಣೆಯ CPI ಸಿಬ್ಬಂದಿಯ ಜೊತೆಯಲ್ಲಿ ಕೊಡಿಯೂಲ ಗ್ರಾಮಕ್ಕೆ ಹೋದೆವು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

2. ಕೊಡಿಯಾಲ ಗ್ರಾಮದಲ್ಲಿ ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಪಂಚರಾಗಿ ಕೆಲಸ ಮಾಡುವಂತೆ ನಿಪಿ-1 ಗುರುತಿಸಿರುವ ನೋಟೀಸನ್ನು ಜಾರಿ ಮಾಡಿದೆನು. ಕೊಡಿಯಾಲ ಗ್ರಾಮದಲ್ಲಿ ಸರ್ಕಾರಿ ಫೌಢಶಾಲೆಯ ದೈಹಿಕ ಶಿಕ್ಷಕರಾಗಿದ್ದ ಡಿ.ವಿ.ಸಿದ್ದರಾಜು ಬಿನ್ ದೇವೆಗೌಡ ರವರಿಗೆ ತನಿಖೆ ಮಾಡುವಾಗ ಪಂಚರಾಗಿ ಕೆಲಸ ಮಾಡುವಂತೆ ನಿಪಿ-13 ರಲ್ಲಿ ಗುರುತಿಸಿರುವ ನೋಟೀಸನ್ನು ಜಾರಿ ಮಾಡಿದೆನು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

3. ಆನಂತರ ಕೆ ಆರ್ ಸಾಗರ ಪೊಲೀಸ್ ಠಾಣೆಯ CPI ಅರಕೆರೆ ಪೊಲೀಸ್ ಠಾಣೆಯ PSI ಸಿಬ್ಬಂದಿ ಡಿ. ವಿ. ಸಿದ್ದರಾಜು, ಮಹೇಶ ರವರ ಜೊತೆಯಲ್ಲಿ ಕೊಡಿಯಾಲ ಗ್ರಾಮದ ಡೈರಿ ಬಳಿ ಇದ್ದ ಶಶಿ ಕುಮಾರ ಬಿನ್ ರಾಮೇಗೌಡ ರವರ ಮನೆಯ ಹತ್ತಿರ ಹೋಗಿ ತನಿಖೆ ಮಾಡಿದೆನು. ನನಗೆ ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರಿಗೆ ಶಶಿಕುಮಾರ ರವರ

ಮನೆಯ ಹಿಂಭಾಗ ಇರುವ ಜಾಗದಲ್ಲಿ 1 ಗಾಂಜಾ ಗಿಡ ಬೆಳೆಸಿರುವುದು ಕಾಣಿಸಿತು. ನಾವು ಸ್ಥಳದಲ್ಲಿ ಸಿಕ್ಕಿದ ಶಶಿಕುಮಾರನನ್ನು ವಿಚಾರಣೆ ಮಾಡಿದಾಗ ಆತ ಗಾಂಜಾ ಗಿಡವನ್ನು ಬೆಳೆದಿರುವುದಾಗಿ 3 ಅಥವಾ 6 ತಿಂಗಳಿಗೆ ಒಮ್ಮೆ ಅಪರಿಚಿತ ಸನ್ಯಾಸಿ ಬಂದು ಗಾಂಜಾ ಸೊಪ್ಪನ್ನು ಖರೀದಿ ಮಾಡಿ ಹೊಗುತ್ತಿರುವುದಾಗಿ ತಿಳಿಸಿದನು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

4. ನಾನು ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರು ಶಶಿಕುಮಾರನಿಂದ ಗಾಂಜಾ ಗಿಡಗಳನ್ನು ಕೀಳಿಸಿದೆನು. ನಾನು ಜೊತೆಯಲ್ಲಿ ಇದ್ದ HC 235 ನೇ ರವರಿಂದ electronic ತೂಕದ ಯಂತ್ರವನ್ನು ತರಿಸಿದೆನು. ಸ್ಥಳದಲ್ಲಿ ಸಿಕ್ಕಿದ ಗಾಂಜಾ ಗಿಡವನ್ನು ತೂಕ ಮಾಡಿದಾಗ ಗಾಂಜಾ ಗಿಡ 770 ಗ್ರಾಂ ತೂಗಿತು. ಸದರಿ ಗಾಂಜಾ ಗಿಡವನ್ನು ಒಂದು ಬಿಳಿಯ ಬಟ್ಟೆಯ ಚೀಲಕ್ಕೆ ಹಾಕಿ ಬಾಯಿ ಕಟ್ಟಿ ಸೀಲು ಮಾಡಿ ಪಂಚರ ಸಮಕ್ಷಮ ನಿಪಿ-2 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿ ನಿಪಿ-3 ರಿಂದ 8 ರವರೆಗೆ ಗುರುಸಿತಿರುವ ಫೋಟೋಗಳನ್ನು ತೆಗೆಸಿ ವಶಡಿಪಸಿಕೊಂಡೆವು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

5. ನಾನು ಮೇಲೆ ಹೇಳಿದಂತೆ ಗಾಂಜಾ ಗಿಡವನ್ನು ವಶಪಡಿಸಿಕೊಂಡು ಅರಕೆರೆ ಪೊಲೀಸ್ ಠಾಣೆಗೆ ಹೋಗಿ ವರದಿಯನ್ನು ತಯಾರಿಸಿ ಅರಕರೆ ಠಾಣಾದಿಕಾರಿಯಾಗಿದ್ದ PSI ಚಾಸಾ-18 ನೇ ಎಂ ಆರ್ ಬ್ಯಾಳಿ ರವರ ಕೈಗೆ ಕೊಟ್ಟೆನು. ನಾನು ವರದಿಯ ಜೊತೆಯಲ್ಲಿ ನಿಪಿ-2 ರಲಿ ಗುರುತಿಸಿರುವ 1 ರಿಂದ 8 ರವರೆಗೆ ಗುರುತಿಸಿರುವ ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಜಾರಿ ಮಾಡಿರುವ ನೋಟೀಸು, ಮಹಜರು ಮತ್ತು ಫೋಟೋಗಳನ್ನು ಚಾಸಾ-18 ರವರ ಕೈಗೆ ಕೊಟ್ಟಿದ್ದೇನೆ. ನಾನು ವರದಿಯ ಜೊತೆಯಲ್ಲಿ ಡಿ ವಿ ಸಿದ್ದರಾಜು ರವರಿಗೆ ಜಾರಿ ಮಾಡಿರುವ ನಿಪಿ-13 ರಲ್ಲಿ ಗುರುತಿಸಿರುವ ನೊಟೀಸು ಚಾಸಾ-18 ರವರ ಸ್ವಾಧೀನಕ್ಕೆ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

6. ನಾನು ಆರೋಪಿಯ ವಿರುದ್ದ ಸುಳ್ಳು ವರದಿಯನ್ನು ಅರಕೆರೆ ಪೊಲೀಸ್ ಠಾಣೆಯ PSI ರವರಿಗೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

7. ನನಗೆ ಗಾಂಜಾ ಗಿಡ ಸಿಕ್ಕಿದ ಜಾಗ ಆರೋಪಿಯ ಮಾಲೀಕತ್ವ ಜಾಗ ಅಲ್ಲ ಎನ್ನುವುದು ನಿಜ. ಆದರೆ ಸದರಿ ಜಾಗವನ್ನು ಬಾಡಿಗೆಯಂತೆ ಆರೋಪಿ ತನ್ನ ಸ್ವಾಧಿನದಲ್ಲಿ ಇಟ್ಟುಕೊಂಡಿದ್ದನು.

8. ನಾನು ನಿಪಿ-12 ರಲ್ಲಿ ಗುರುತಿಸಿರುವ ವರದಿಯಲ್ಲಿ ಉಲ್ಲೇಖಿಸಿರುವ ರಮಾಮಣಿ ಎನ್ನುವವರನ್ನು ವಿಚಾರಣೆ ಮಾಡಿಲ್ಲ.

9. ಆರೋಪಿಯು ವಾಸವಾಗಿದ್ದ ಮನೆಯಿಂದ ಸುಮಾರು 50 ರಿಂದ 100 ಮೀಟರ್ ದೂರದಲ್ಲಿ ಅನೇಕ ಮನೆಗಳು ಇವೆ. ಆರೋಪಿಯ ಮನೆಯ ಹತ್ತಿರದಲ್ಲಿ ಇದ್ದ ಮನೆಗಳ ವಾಸಿಗಳನ್ನು ಪಂಚರಾಗಿ ಕೆಲಸ ಮಾಡುವಂತೆ ನಾನು ಕರೆದಿಲ್ಲ.

10. ನನಗೆ ಗಾಂಜಾ ಗಿಡ ಸಿಕ್ಕಿದ ಜಾಗಕ್ಕೂ ಆರೋಪಿಗೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ.

11. ನಾನು ಆರೋಪಿಯ ವಿರುದ್ಧ ಸುಳ್ಳು ದಾಖಲೆಗಳನ್ನು ಮತ್ತು ಫೋಟೋಗಳನ್ನು ಸೃಷಿಸಿದ್ದೇನೆ ಎನ್ನುವುದು ಸರಿಯಲ್ಲ.

12. ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ– ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–</u>

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜಿ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.